**ಆಯುಕ್ತರು, ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಕಛೇರಿ ನಡವಳಿಗಳು**

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಹಾಯಾನುದಾನಿತ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ, ಸಂಸ್ಥೆಯಲ್ಲಿನ ಇ & ಸಿ.ಮತ್ತು ಐ & ಪಿ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 29 ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ವೇತನಾನುದಾನಕ್ಕೆ ಒಳಪಡಿಸಿ ಸರ್ಕಾರದ ಆದೇಶದಂತೆ ವೇತನಾನುದಾನಕ್ಕೊಳಪಟ್ಟ ದಿನಾಂಕದಿಂದ ಬಾಕಿ ವೇತನ ಪಾವತಿಸುವ ಕುರಿತು.

**ಉಲ್ಲೇಖ:**
1) ಸರ್ಕಾರದ ಆದೇಶ ಸಂಖ್ಯೆ: ಇಡಿ 47 ಟಿಇಸಿ 2024 ಬೆಂಗಳೂರು, ದಿನಾಂಕ;09.02.2024..
2) ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: ಸಿಸಿಸಿ :100281/2023 ರಲ್ಲಿ ದಿನಾಂಕ;07.02.2024.
3) ಈ ಕಛೇರಿ ಅನಧಿಕೃತ ಟಿಪ್ಪಣಿ ಸಂಖ್ಯೆ;DTE-ADMIO/EST(14)/78/2021,ದಿನಾಂಕ;13-02-2024.

ಪ್ರಸ್ತಾವನೆ:

ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಡುವ ಬಾಗಲಕೋಟೆ, ಸಂಸ್ಥೆಯಲ್ಲಿನ ಇ & ಸಿ.ಮತ್ತು ಐ & ಪಿ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 29 ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ವೇತನಾನುದಾನಕ್ಕೆ ಒಳಪಡಿಸಿ ಆದೇಶಿಸಲಾಗಿರುತ್ತದೆ.

ಉಲ್ಲೇಖ (2) ರ ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: ಸಿಸಿಸಿ :100281/2023 , ದಿನಾಂಕ;07.02.2024. ಆದೇಶದಂತೆ ಮಾನ್ಯ ನ್ಯಾಯಾಲಯದ ನಿರ್ದೇಶನದಂತೆ ಹಾಗೂ ಸದರಿ 02 ಕೋರ್ಸ್ ಅನುದಾನಕ್ಕೊಳಪಡಿಸಿದ ಆದೇಶ ದಿನಾಂಕ 04.06.2010 ರಿಂದ ಅನ್ವಯವಾಗುವಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ದಿನಾಂಕ;04.06.2010 ರಿಂದ ಅನ್ವಯವಾಗುವಂತೆ ಆರ್ಥಿಕ ಸೌಲಭ್ಯದೊಂದಿಗೆ ವೇತನಾನುದಾನಕ್ಕೆ ಒಳಪಡಿಸಲು ತೀರ್ಮಾನಿಸಿ ಅದರಂತೆ ಸರ್ಕಾರದ ಆದೇಶ ಸಂಖ್ಯೆ; ಇಡಿ 47 ಟಿಇಸಿ 2024 ಬೆಂಗಳೂರು, ದಿನಾಂಕ;09.02.2024 ರಲ್ಲಿ ಶ್ರೀ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ ಸಂಸ್ಥೆಯ ಇ & ಸಿ ಮತ್ತು ಐ & ಪಿ ಇಂಜಿನಿಯರಿಂಗ್ ವಿಭಾಗಗಳಿಗೆ ಸಿಬ್ಬಂದಿ ಮಾದರಿಯಲ್ಲಿ ಮಂಜೂರಾಗಿರುವ ಒಟ್ಟು 42 ಬೋಧಕ ಮತ್ತು ಬೋಧಕೇತರ ಹುದ್ದೆಗಳಲ್ಲಿ (06 ಹುದ್ದೆಗಳು ಖಾಲಿಯಿರುತ್ತವೆ ಮತ್ತು 01 ದೈಹಿಕ ಶಿಕ್ಷಣ ಸಹಾಯಕ ನಿರ್ದೇಶಕರ ಹುದ್ದೆಯ ಸಿಬ್ಬಂದಿ ನೇಮಕಾತಿ ಸಂದರ್ಭದಲ್ಲಿ ನಿಗದಿತ ವಯೋಮಿತಿ ಮೀರುರುತ್ತಾರೆ)ಇ & ಸಿ ವಿಭಾಗದ 11 ಬೋಧಕ ಸಿಬ್ಬಂದಿಗಳು,02 ಬೋಧಕೇತರ ಸಿಬ್ಬಂದಿಗಳು ಹಾಗೂ ಐ & ಪಿ ವಿಭಾಗದ 05 ಬೋಧಕ, ಬೋಧಕೇತರ ಸಿಬ್ಬಂದಿಗಳು ಮತ್ತು 06 ಕಛೇರಿ ಸಿಬ್ಬಂದಿಗಳನ್ನು ಅನುಬಂಧದಲ್ಲಿರುವಂತೆ ದಿನಾಂಕ:04.06.2010 ರಿಂದ ಅನ್ವಯವಾಗುವಂತೆ ಆರ್ಥಿಕ ಸೌಲಭ್ಯದೊಂದಿಗೆ 11 ಷರತ್ತುಗಳಿಗೊಳಪಟ್ಟು ವೇತನಾನುದಾನಕ್ಕೆ ಒಳಪಡಿಸಿ **ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 109 ವೆಚ್ಚ-8/2024ರ** ಸಹಮತಿ ಮೇರೆಗೆ ಆದೇಶವನ್ನು ಹೊರಡಿಸಲಾಗಿರುತ್ತದೆ.

ಉಲ್ಲೇಖ (3) ರ ಈ ಕಛೇರಿ ಅನಧೀಕೃತ ಟಿಪ್ಪಣಿ ಸಂಖ್ಯೆ;DTE-ADMIO/EST(14)/78/2021,ದಿನಾಂಕ;13-02-2024. ಹಾಗೂ ಅದರಲ್ಲಿನ ಲೆಕ್ಕ ಪಟ್ಟಿಯಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠ, ನ್ಯಾಯಾಲಯ ನಿಂದನಾ ಅರ್ಜಿ ಸಂಖ್ಯೆ:100281/2023 ರಲ್ಲಿ ದಿನಾಂಕ;07.02.2024ರಂದು ನೀಡಿರುವ ಆದೇಶದಂತೆ ದಿನಾಂಕ;14.02.2024ರ ಒಳಗಾಗಿ ಪ್ರಸ್ತಾಪಿತರುಗಳಿಗೆ ಬಾಕಿ ವೇತನವನ್ನು ಪಾವತಿಸುವಂತೆ ಆದೇಶಿಸಲಾಗಿರುವ ಸಂಬಂಧ ಶ್ರೀ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ ಸಂಸ್ಥೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ; ಇಡಿ 47 ಟಿಇಸಿ 2024 ಬೆಂಗಳೂರು, ದಿನಾಂಕ;09.02.2024 ರ ಆದೇಶದಂತೆ, ಸದರಿ ಆದೇಶದಲ್ಲಿನ ಅನುಬಂಧದಲ್ಲಿ ಹೆಸರಿಸಿರುವ ಸಿಬ್ಬಂದಿಯವರುಗಳಿಗೆ ಸರ್ಕಾರದ ಆದೇಶದಲ್ಲಿನ 11 ಷರತ್ತಿಗೊಳಪಟ್ಟು ವೇತನ ಬಾಕಿಯನ್ನು ಮಾನ್ಯ ಆಡಳಿತಾಧಿಕಾರಿಯವರ ಅನಧೀಕೃತ ಟಿಪ್ಪಣಿ ಸಂಖ್ಯೆ;DTE-ADMIO/EST(14)/78/2021,ದಿನಾಂಕ;12-02-2024 ರಲ್ಲಿನ ಅಂದಾಜು ಲೆಕ್ಕ ಪಟ್ಟಿಯಂತೆ ಪ್ರಸ್ತಾಪಿತ ಸಿಬ್ಬಂದಿಯವರುಗಳ ಬ್ಯಾಂಕ್ ಖಾತೆ, ರಿಸಿಪಿಯೆಂಟ್ ಐಡಿ ಹಾಗೂ ಇನ್ನಿತರ ಅವಶ್ಯ ಮಾಹಿತಿಗಳು ಲಭ್ಯವಿಲ್ಲದ ಕಾರಣ ಶ್ರೀ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು ಸಂಸ್ಥೆಯ, ಪ್ರಾಂಶುಪಾಲರ ಬ್ಯಾಂಕ್ ಖಾತೆಗೆ ಬಿಡುಗಡೆಗೊಳಿಸುವ ಪ್ರಸ್ತಾವನೆಯ ಸಂಬಂಧ ಸದರಿ ಸಿಬ್ಬಂದಿಯವರಿಗೆ ಈಗ ಒಟ್ಟಾರೆ ಬಿಡುಗಡೆಯಾಗಬೇಕಾದ ಅನುದಾನದ ವಿವರಗಳನ್ನು ಈ ಕೆಳಕಂಡ ಅನುಬಂಧದಲ್ಲಿ ನೀಡಲಾಗಿದೆ

01 ಅನುದಾನಿತ ಇಂಜಿನಿಯರಿಂಗ್ ಕಾಲೇಜಿನಲ್ಲಿನ 29 ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಬಿಡುಗಡೆಯಾಗುವ ಸರ್ಕಾರದ ಪಾಲಿನ ಶೇ 85% ಮೊತ್ತವನ್ನು ಶ್ರೀ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು ಸಂಸ್ಥೆಯ, ಪ್ರಾಂಶುಪಾಲರ ರಸಿಪಿಯಂಟ್ ಐಡಿಗೆ ಜಮ ಮಾಡಬೇಕಾಗಿರುವ ಬಾಕಿ ವೇತನಾನುದಾನ ಮೊತ್ತ ಹಾಗೂ ವಿವರ ಈ ಕೆಳಕಂಡಂತಿದೆ.

Scanned with OKEN Scanner

| ಕ್ರ. ಸಂ | ಸಂಸ್ಥೆಯ ಹೆಸರು | ಸಿಬ್ಬಂದಿಯ ಹೆಸರು ಹಾಗೂ ಹುದ್ದೆ | ರೆಸಿಪಿಯಂಟ್ ಐಡಿ | ಬ್ಯಾಂಕ್ ಉಳಿತಾಯ ಖಾತೆ | ಬಿಡುಗಡೆ ಮಾಡಲು ನಿರ್ಧರಿಸಿರುವ ಸರ್ಕಾರದ ಪಾಲಿನ 85% ಮೊತ್ತ (ರೂ.) |
|---|---|---|---|---|---|
| 1 | 2 | 3 | 5 | 6 | 7 |
| 1 | ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು ಬಾಗಲಕೋಟೆ | ಪ್ರಾಂಶುಪಾಲರು | 1403309375 | 64049882671 | 13,85,73,219 |

ಸರ್ಕಾರದಿಂದ ಬಿಡುಗಡೆಯಾಗಬೇಕಾಗಿರುವ ಸರ್ಕಾರದ ಪಾಲಿನ ಶೇ.85% ಮೊತ್ತ;ರೂ. 13,85,73,219/-( ರೂಪಾಯಿ ಹದಿಮೂರು ಕೋಟಿ ಎಂಭತ್ತೈದು ಲಕ್ಷದ ಎಪ್ಪತ್ತಮೂರು ಸಾವಿರದ ಎರಡು ನೂರು ಹತ್ತೊಂಬತ್ತು ಮಾತ್ರ)ಗಳನ್ನು ಮೇಲ್ಕಂಡ ಅನುಬಂಧದಲ್ಲಿ ತಿಳಿಸಿರುವ ಮೊತ್ತ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. ಆದುದರಿಂದ ಈ ಕೆಳಕಂಡ ಆದೇಶ.

## ಆದೇಶ

**ಸಂಖ್ಯೆ: ಡಿಟಿಇ 03 ಜಿಆರ್‌ಟಿ (2) 2024, ಬೆಂಗಳೂರು, ದಿ:13-02-2024.** 1354

ಪ್ರಸ್ತಾವನೆಯಲ್ಲಿ ಈಗಾಗಲೇ ವಿವರಿಸಿರುವಂತೆ ಅನುಬಂಧಲ್ಲಿ ತಿಳಿಸಿರುವ ಪ್ರಾಂಶುಪಾಲರ ರೆಸಿಪಿಯಂಟ್ ಐಡಿಗೆ ಸರ್ಕಾರದ ಪಾಲಿನ ಶೇ.85% ಅನುದಾನದ ಮೊತ್ತ;ರೂ.13,85,73,219/-(ರೂಪಾಯಿ ಹದಿಮೂರು ಕೋಟಿ ಎಂಭತ್ತೈದು ಲಕ್ಷದ ಎಪ್ಪತ್ತಮೂರು ಸಾವಿರದ ಎರಡು ನೂರು ಹತ್ತೊಂಬತ್ತು ಮಾತ್ರ) ಗಳನ್ನು ಬಿಡುಗಡೆ ಮಾಡಲಾಗಿದೆ.

ಹೀಗೆ ಬಿಡುಗಡೆ ಮಾಡಲಾದ ಮೊತ್ತ ಸರ್ಕಾರದ ಪಾಲಿನ ಶೇ.85% ಮೊತ್ತ;ರೂ. 13,85,73,219/- (ರೂಪಾಯಿ ಹದಿಮೂರು ಕೋಟಿ ಎಂಭತ್ತೈದು ಲಕ್ಷದ ಎಪ್ಪತ್ತಮೂರು ಸಾವಿರದ ಎರಡು ನೂರು ಹತ್ತೊಂಬತ್ತು ಮಾತ್ರ)ಗಳನ್ನು ಅನುಬಂಧಲ್ಲಿ ತಿಳಿಸಿರುವ ಶ್ರೀ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು ಸಂಸ್ಥೆಯ, ಪ್ರಾಂಶುಪಾಲರ ಬ್ಯಾಂಕ್ ಖಾತೆಗೆ , ರೆಸಿಪಿಯಂಟ್ ಐಡಿಗೆ ಖಜಾನೆ-2 ಮೂಲಕ, ಸಿಟಿಎಸ್-13 ಬಳಸಿ ಜಮ ಮಾಡಲು ಆದೇಶಿಸಲಾಗಿದೆ.

ಷರತ್ತು ಮತ್ತು ನಿಬಂಧನೆಗಳು:-

ಇಷ್ಟು ಭಾರಿ ಆರ್ಥಿಕ ಪರಿಣಾಮವನ್ನೊಳಗೊಂಡ ಸದರಿ ಪ್ರಸ್ತಾವನೆಯನ್ನು ಸಂಸ್ಥೆಯ ಪ್ರಾಂಶುಪಾಲರು ಕೂಲಂಕಷವಾಗಿ ಪರಿಶೀಲಿಸಿ ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 133 ರಂತೆ ದೃಢೀಕರಿಸಿದ ಡ್ಯೂ-ಡ್ರಾನ್ ತಃಖ್ತೆಯನ್ನು ಸಲ್ಲಿಸಲು ಕಾಲೇಜಿನ ಪ್ರಾಂಶುಪಾಲರಿಗೆ ಮಿಂಚಂಚೆಯ ಮುಖಾಂತರ ದಿ: 12-02-2024 ರಂದು ತಿಳಿಸಲಾಗಿರುತ್ತದೆ, ಆದರೆ, ಕಾಲೇಜಿನಿಂದ ಯಾವುದೇ ದೃಢೀಕೃತ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ, ಆದ್ದರಿಂದ ತಕ್ಷಣ ಸಲ್ಲಿಸುವುದು.

ವೇತನ ಬಾಕಿ ಬಿಲ್ ಗಳನ್ನು HRMS ತಂತ್ರಾಂಶದ ಮುಖಾಂತರ ಸೆಳೆಯಲು ಆರ್ಥಿಕ ಇಲಾಖೆಯಿಂದ ಆದೇಶಗೊಂಡಿರುತ್ತದೆ. ಆದರೆ, HRMS ಮುಖಾಂತರ ಬಿಲ್ ಗಳನ್ನು ಶಾಖೆಗೆ ಸಲ್ಲಿಸಲಾಗಿರುವುದಿಲ್ಲ. ಈ ರೀತಿ **ಸೂಕ್ತ ದೃಢೀಕೃತ ದಾಖಲೆಗಳನ್ನು ತಕ್ಷಣ ಸಲ್ಲಿಸುವುದು..**

ಅದಾಗ್ಯೂ, **ನ್ಯಾಯಾಲಯ ನಿಂದನಾ ಪ್ರಕರಣವಾಗಿರುವ ಕಾರಣ**, ಈ ಕೆಳಕಂಡಂತೆ:

1. ಸರ್ಕಾರದ ಆದೇಶ ಸಂ: ಇಡಿ 47 ಟಿಇಸಿ 2024; ದಿ: 09-02-2024 ರಲ್ಲಿನ ಎಲ್ಲಾ ಷರತ್ತುಗಳನ್ನು ಪೂರೈಸಿರುವ ಕುರಿತು ಇಲಾಖೆ ವಿವಿಧ ವಿಭಾಗಗಳು ಪರಿಶೀಲಿಸಿದ ನಂತರವಷ್ಟೇ ಪೂರ್ಣ ಮೊತ್ತ ಬಿಡುಗಡೆಗೊಳಿಸುವುದು ಸೂಕ್ತವಿರುತ್ತದೆ. ಆದರೆ, **ನ್ಯಾಯಾಂಗ ನಿಂದನಾ ಪ್ರಕರಣ**ವಿರುವ ಕಾರಣ ಸರ್ಕಾರದ ಆದೇಶದಲ್ಲಿನ ಎಲ್ಲಾ ಷರತ್ತುಗಳನ್ನು ಪೂರೈಸುವ ಷರತ್ತಿಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

2. ಸರ್ಕಾರದ ಸುತ್ತೋಲೆ ಸಂ: ಇಡಿ 134 ಟಿಪಿಇ 2007; ದಿ: 09-04-2008 ರಂತೆ, ವೇತನಾನುದಾನಕ್ಕೆ ಒಳಪಡಿಸಿದ ದಿನಾಂಕದಿಂದ ಸಂಸ್ಥೆಯ ಆಡಳಿತ ಮಂಡಳಿಯವರು ಪಾವತಿಸಿರುವ ವೇತನದ ಮೊತ್ತವನ್ನು ಕಡಿತಗೊಳಿಸಿ ಬಾಕಿ ಮೊತ್ತವನ್ನು ಮಾತ್ರ ಬಿಡುಗಡೆ ಮಾಡತಕ್ಕದ್ದು. ಅದರಂತೆ ಸಂಸ್ಥೆಯ ಪ್ರಾಂಶುಪಾಲರು ಕ.ಆ.ಸಂ. ಅನುಚ್ಛೇದ 133 ರಂತೆ ದೃಢೀಕರಿಸಿ ಡ್ಯೂ-ಡ್ರಾನ್ ತಃಖ್ತೆಯನ್ನು ಸಲ್ಲಿಸತಕ್ಕದ್ದು.

Scanned with OKEN Scanner

3. ಸದರಿ 29 ಬೋಧಕ ಹಾಗು ಬೋಧಕೇತರ ಸಿಬ್ಬಂದಿಗಳಿಗೆ ನಿಯಮಾನುಸಾರ ವೇತನ ಪುನರ್ ನಿಗದಿಗೆ ಘಟನೋತ್ತರ ಅನುಮೋದನೆ ಪಡೆಯುವುದು.

4. ವೇತನ ಬಾಕಿಯ ಅವಧಿಗೆ ಸಂಬಂಧಿಸಿದಂತೆ, ಸದರಿ ಕೋರ್ಸ್‌ಗಳ ಪ್ರವೇಶ ಸೀಟುಗಳನ್ನು ಸರ್ಕಾರದ ನಿಯಮ ಮತ್ತು ನಿಬಂಧನೆಗಳನ್ವಯ ಭರ್ತಿ ಮಾಡಿಕೊಂಡಿರುವ ಬಗ್ಗೆ ಸಂಬಂಧಪಟ್ಟ ವಿಭಾಗದಿಂದ ಪರಿಶೀಲಿಸುವುದು.

5. ಸರ್ಕಾರದಿಂದ ಕಾಲಕಾಲಕ್ಕೆ ಅನುಗುಣವಾಗಿ ಅನುಮೋದಿತ ಶುಲ್ಕವನ್ನು ಸರ್ಕಾರದ ಬೊಕ್ಕಸಕ್ಕೆ ಜಮ ಮಾಡಿರುವ ಕುರಿತು ದೃಢೀಕೃತ ಮಾಹಿತಿ ಸಲ್ಲಿಸುವುದು,

6. ಸದರಿ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ, ಎಐಸಿಟಿಇ, ರಾಜ್ಯ ಸರ್ಕಾರದ ನೇಮಕಾತಿ ನಿಯಮಗಳು, ಹಾಗೂ ಇನ್ನಿತರ ಸೇವಾ ವಿಷಯಗಳ ಕುರಿತು ಆಯುಕ್ತಾಲಯದ ಸಂಬಂಧಪಟ್ಟ ಸಿಬ್ಬಂದಿ ಶಾಖೆಯಿಂದ ಪರಿಶೀಲಿಸಿ ದೃಢೀಕರಿಸುವುದು.

7. ಮಹಾಲೇಖಪಾಲರ /ಇಲಾಖಾ ಲೆಕ್ಕ ಪರಿಶೋಧನೆಗೊಳಪಡುವ ಷರತ್ತಿಗೊಳಪಟ್ಟಿರುತ್ತದೆ.

8. ಈಗ ಬಿಡುಗಡೆ ಮಾಡಿರುವ ಅನುದಾನವನ್ನು ಪ್ರಿನ್ಸಿಪಾಲರು ಸಲ್ಲಿಸುವ ಬಿಲ್ಲಿನ ಆಧಾರದ ಮೇಲೆ ಪಾವತಿಸಬೇಕಾದ ಬಾಕಿ ಮೊತ್ತವನ್ನು ಪರಿಗಣಿಸಲಾಗುವುದು. ಆದುದರಿಂದ, ಈ ಪಾವತಿಯು ಇಲಾಖೆಯ ಪೂರ್ಣ ಲೆಕ್ಕ ತಪಾಸಣೆಗೆ ಒಳಪಟ್ಟಿರುತ್ತದೆ.

9. ಲೆಕ್ಕ ತಪಾಸಣೆಯಲ್ಲಿ ಹೆಚ್ಚುವರಿ ಅನುದಾನವು ಪಾವತಿಯಾಗಿರುವುದು ಕಂಡು ಬಂದಲ್ಲಿ, ಆಯಾ ಸಂಸ್ಥೆಗಳಿಂದ ಇಲಾಖೆಯು ನಿರ್ಧರಿಸುವ ರೀತಿಯಲ್ಲಿ ವಸೂಲಿಸಲಾಗುವುದು.

10. ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2203- ತಾಂತ್ರಿಕ ಶಿಕ್ಷಣ -00-112-ಸರ್ಕಾರೇತರ ತಾಂತ್ರಿಕ ಕಾಲೇಜು ಮತ್ತು ಸಂಸ್ಥೆಗಳಿಗೆ ಸಹಾಯ-0-07 ಸರ್ಕಾರೇತರ ತಾಂತ್ರಿಕ ಶಾಲೆಗಳು-101-ಸಹಾಯಾನುದಾನ (2203-00-112-0-07-101) ಅಡಿ 2023-24ರ ಸಾಲಿನ ಆಯವ್ಯಯದಲ್ಲಿ ಭರಿಸತಕ್ಕದ್ದು.

ಮಾನ್ಯ ಉಚ್ಚ ನ್ಯಾಯಾಲಯದಲ್ಲಿನ ಮೇಲ್ಮನವಿ ಸಂಖ್ಯೆ: WA:100002/2024 ಮತ್ತು WA:100003/2024 ರಲ್ಲಿ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿನ ಪಾಲನೆಯ ಷರತ್ತಿಗೊಳಪಟ್ಟು ಹಾಗೂ ಈ ಮೇಲಿನ ಎಲ್ಲಾ ಷರತ್ತುಗಳಿಗೊಳಪಟ್ಟು, ಮತ್ತು ಷರತ್ತುಗಳನ್ನು ಪೂರೈಸದಿರುವುದು ಕಂಡುಬಂದಲ್ಲಿ ಸದರಿ ಮೊತ್ತವನ್ನು ಹಿಂಪಡೆಯುವ ಷರತ್ತಿಗೊಳಪಟ್ಟು, ಸದರಿ ಸಿಬ್ಬಂದಿಗಳ ರಸಿಪಿಯೆಂಟ್ ಐಡಿ ಗಳ ಮಾಹಿತಿಯು ಲಭ್ಯವಿರದ ಹಿನ್ನೆಲೆಯಲ್ಲಿ, ಕಾಲೇಜಿನ ಪ್ರಾಂಶುಪಾಲರ ರಸಿಪಿಯೆಂಟ್ ಐಡಿಗೆ ರೂ. 13,85,73,219/- ಗಳನ್ನು ಲೆಕ್ಕ ಶೀರ್ಷಿಕೆ: 2203-00-112-0-07-101 ರಡಿ ಬಿಡುಗಡೆಗೊಳಿಸಿ, ಈ ಮೇಲಿನ ಎಲ್ಲಾ ಷರತ್ತುಗಳನ್ನು ಪೂರೈಸಿರುವುದರ ಕುರಿತು ಲೆಕ್ಕ ಪರಿಶೋಧನೆಗೊಳಪಡಿಸಿದ ನಂತರ ಉಳಿದ ಅರ್ಹತಾ ಮೊತ್ತವನ್ನು ಬಿಡುಗಡೆಗೊಳಿಸಲು ಆದೇಶಿಸಿದೆ.

(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಿದೆ)

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

**ಇವರಿಗೆ:**

1. ಆಯುಕ್ತಾಲಯದ ಬಿಎಲ್ಎಸ್ (3) ವಿಭಾಗಕ್ಕೆ ಮುಂದಿನ ಕ್ರಮಕ್ಕಾಗಿ.
2. ಪ್ರಾಂಶುಪಾಲರು, ಬಸವೇಶ್ವರ ಅನುದಾನಿತ ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ.
3. ವಿಷಯ ನಿರ್ವಾಹಕರು, ಕಾನೂನು ಘಟಕ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.

**ಪ್ರತಿ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸ್ಪೆಷಲ್ ಸೆಲ್, ಮಹಾಲೇಖಪಾಲರ ಕಛೇರಿ, ಬೆಂಗಳೂರು
3. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ವಜಾನೆ, ಬೆಂಗಳೂರು.
4. ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿ (ಅ) ಲೆಕ್ಕಾಧಿಕಾರಿಗಳು [ಬಿಲ್ಸ್] (ಆ) ನಗದು ಶಾಖೆ (ಇ) ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿ ಇ-ಗವರ್ನೆನ್ಸ್ ವಿಭಾಗ- ಮಾಹಿತಿಗಾಗಿ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.

Scanned with OKEN Scanner